S C.R.P.67

| Form No.4 (Criminal) Deposition Sheets (R.P.No.57) |
|---|

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ಃ 208/2019

**ಚಾ.ಸಾ.–03 ಪ್ರಾ.ಸಾ.–04**

| | |
|---|---|
| **ಸಾಕ್ಷಿದಾರರ ಹೆಸರು** | **ರಾಜು ಉಃ ರಾಜಣ್ಣ** |
| **ತಂದೆಯ ಹೆಸರು** | **ದೊಡ್ಡ ಹನುಮಯ್ಯ** |
| **ವಯಸ್ಸು** | **74 ವರ್ಷಗಳು** |
| **ಉದ್ಯೋಗ** | **ಕೂಲಿ ಕೆಲಸ** |
| **ವಾಸ** | **ಪಿ.ಹೊಸಹಳ್ಳಿ ಗ್ರಾಮ.** |

**ದಿನಾಂಕಃ 24.02.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ–1 ರವರ ಪರಿಚಯ ನನಗೆ ಇಲ್ಲ. ಅವರು ಯಾವ ಊರಿನವರು ಯಾವ ಜಾತಿಯವರು ಎಂದು ನನಗೆ ಗೊತ್ತಿಲ್ಲ. ನನಗೆ ಚಾಸಾ- 2, 4, 5, 6 ರವರ ಪರಿಚಯ ಇರುವುದಿಲ್ಲ.

2) ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ನನಗೆ ಇದೆ (Witness identified accused Nos. 1 and 2 in the dock).ಅವರು ಯಾವ ಜಾತಿಯವರು ಎಂದು ನನಗೆ ಗೊತ್ತಿಲ್ಲ. 2ನೇ ಆರೋಪಿ ಶ್ರೀರಂಗಪಟ್ಟಣದಲ್ಲಿ ಪೋಲೀಸಾಗಿ ಕೆಲಸ ಮಾಡುತ್ತಿದ್ದರು.

3) ಮೊಗರಹಳ್ಳಿ ಸರ್ವೆ ನಂ.50 ರಲ್ಲಿ ಪೋಲೀಸರೆಲ್ಲರು ಸೇರಿ ಹಣ ಸಂಗ್ರಹಿಸಿ ಒಬ್ಬರ ಹೆಸರಿನಲ್ಲಿ ಸೈಟುಗಳನ್ನು ಖರೀದಿ ಮಾಡಿದ್ದರು. ಸದರಿ ಸೈಟುಗಳಿಗೆ ರಸ್ತೆ ಮಾಡಿ ಕಲ್ಲುಗಳನ್ನು ನೆಟ್ಟು ಬೋರ್ಡ್ ಹಾಕಿಸುವ ಕೆಲಸವನ್ನು ನಾನು ಮಾಡಿರುತ್ತೇನೆ. 4 – 5 ವರ್ಷಗಳ ಹಿಂದೆ ಇನ್ನು ಕೆಲವು ಸೈಟುಗಳಿಗೆ ಕಲ್ಲು ನೆಟ್ಟು ಬೋರ್ಡ್ ಹಾಕುವ ಕೆಲಸ

ಬಾಕಿ ಇದ್ದು ನಾನು ಮತ್ತು ಮಹದೇವರವರು ಉಳಿದ ಕೆಲಸ ಮಾಡಲು ಹೋದಾಗ ನಾವು ನೆಟ್ಟಿದ್ದ ಕಲ್ಲುಗಳನ್ನೆಲ್ಲಾ ಕಿತ್ತು ಹಾಕಿದ್ದು ಬೋರ್ಡ್ಗಳನ್ನು ಹೊಡೆದು ಹಾಕಿದ್ದರು. ಅದನ್ನು ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕಲ್ಲನ್ನು ಕಿತ್ತು ಹಾಕಿ ಬೋರ್ಡ್ಗಳನ್ನು ಹೊಡೆದು ಹಾಕಿರುವವರನ್ನು ನೋಡಿರುತ್ತೇನೆ ಎಂದು ನಾನು ಪೋಲೀಸರಿಗೆ ಹೇಳಿರುವುದಿಲ್ಲ, ಕಲ್ಲು ಕಿತ್ತು ಹಾಕಿ ಬೋರ್ಡ್ ಹೊಡೆದು ಹಾಕಿದವರಲ್ಲಿ ಆರೋಪಿತರು ಇದ್ದರೋ ಎಂದು ನನಗೆ ಗೊತ್ತಿಲ್ಲ. ಅವರು ಇದ್ದರು ಎಂದು ನಾನು ಪೋಲೀಸರಿಗೆ ಹೇಳಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**<u>ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

4) ದಿಃ07.03.2019 ರಂದು ನಾನು ಶ್ರೀರಂಗಪಟ್ಟಣ ಡಿ.ವೈ.ಎಸ್.ಪಿ ರವರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ13.01.2019 ರಂದು ಬೆಳಿಗ್ಗೆ 11.00 ಗಂಟೆಗೆ ನಾನು ಮತ್ತು ಚಾಸಾ-4 ರವರು ಕೆ.ಆರ್.ಎಸ್ ಮುಖ್ಯ ರಸ್ತೆಯಲ್ಲಿ ಹೋಗುತ್ತಿದ್ದಾಗ ನಾನು ರಸ್ತೆ ಮಾಡಿ ಹಾಕಿದ್ದ ಕಲ್ಲು ಮತ್ತು ಬೋರ್ಡ್ನ್ನು ಯಾರೋ ಕಿತ್ತು ಹಾಕುತ್ತಿದ್ದು ಹತ್ತಿರಕ್ಕೆ ಹೋಗಿ ನೋಡಿದಾಗ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರು ಅವುಗಳನ್ನು ಕಿತ್ತು ಹಾಕುತ್ತಿದ್ದರು ಎಂದರೆ ಸರಿಯಲ್ಲ. ಅಷ್ಟರಲ್ಲಿ ಪೋಲೀಸ್ ನಾಗರಾಜುರವರು ಪೋನ್ ಮಾಡಿ ಕಲ್ಲು ಹಾಕುತ್ತಿರುವ ಬಗ್ಗೆ ವಿಚಾರ ಮಾಡಿದ್ದು ಅವರಿಗೆ ಆರೋಪಿತರು ಕಲ್ಲು ಕಿತ್ತು ಹಾಕುತ್ತಿರುವ ವಿಚಾರವನ್ನು ನಾನು ತಿಳಿಸಿದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. **"ಈಗಿರುವಾಗ ..............… .............. … ..............… ..............… ..............… ..............…** ಮತ್ತೆ ನೋಡಿದರೆ ಗುರುತಿಸುತ್ತೇನೆ" ಎಂಬ ಹೇಳಿಕೆಯನ್ನು ಪೋಲೀಸರಿಗೆ ನೀಡಿರುತ್ತೇನೆ

ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ.12** ಎಂದು ಗುರುತಿಸಲಾಯಿತು.

5) ನಾನು ಈ ಪ್ರಕರಣದ ಘಟನೆಯನ್ನು ಖುದ್ದು ನೋಡಿದ್ದರೂ ಸಹಾ ಈ ವಿಷಯವನ್ನು ಪೋಲೀಸ್ ನಾಗರಾಜುರವರಿಗೆ ತಿಳಿಸಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿತರ ಪರ ಶ್ರೀಮತಿ ಹೆಚ್.ಎಸ್.ಆರ್ ವಕೀಲರಿಂದಃ ಆರೋಪಿತರ ಪರ ವಕೀಲರು ಗೈರು ಹಾಜರಿದ್ದು ಆರೋಪಿತರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ